<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>
**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲೂ- | 05 |
| ಪಿಡಬ್ಲೂ- | 05 |

| | |
|---|---|
| ಹೆಸರು | ವಿಜಯಕುಮಾರ |
| ತಂದೆ | ನರಸಪ್ಪ |
| ವಯಸ್ಸು | 60 ವರ್ಷ |
| ಕೆಲಸ | ಪೆಟಿಂಗ್ ಕೆಲಸ |
| ವಾಸಸ್ಥಳ | ಕೊಪ್ಪಳ |

<u>ಮುಖ್ಯ ವಿಚಾರಣೆ : ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ನನ್ನ ತಂದೆ ನರಸಪ್ಪ ತಂದೆ ಯಂಕಪ್ಪ ಕರಮುಡಿ ಇವರ ಹೆಸರಿನಲ್ಲಿ ಕೊಪ್ಪಳದ ಜಮೀನು ಸರ್ವೇ ನಂ. 273/ಎ 1 ಕ್ಷೇತ್ರ 4 ಎಕರೆ, 271/3 ಕ್ಷೇತ್ರ 9 ಎಕರೆ ಪೈಕಿ 5 ಎಕರೆ ಇದ್ದವು. 1987 ರಲ್ಲಿ ನಮ್ಮ ತಂದೆ ಮರಣ ಹೊಂದಿದ್ದಾರೆ. ನಾವು 5 ಗಂಡು 2 ಹೆಣ್ಣು ಮಕ್ಕಳು ಇದ್ದೇವೆ. 1) ಸುಭಾಷ 2) ಶಾಂತಾಬಾಯಿ 3) ಅಶೋಕ 4) ಸುರೇಶ 5) ವಿಜಯಕುಮಾರ 6) ಸುಮಿತ್ರಾಬಾಯಿ 7) ಮದುಸೂದನ್,

2. ನಾವು ಹೊಲ ಮಾರಬೇಕು ಎಂದುಕೊಂಡೆವು, ಆದರೆ ಸರ್ವೇ ನಂ. 273/ಎ 1 ಕ್ಷೇತ್ರ 4 ಎಕರೆ, ಇದ್ದದ್ದು ಸರ್ವೇ ನಂ. 271 ಕ್ಷೇತ್ರ 4 ಎಕರೆ ಅಂತಾ 1994 ರಲ್ಲಿ ಬದಲಾಯಿತು. ಸರ್ವೆ ನಂ. 271/3 ಕ್ಷೇತ್ರ 9 ಎಕರೆ ಪೈಕಿ 5 ಎಕರೆ ಇದ್ದದ್ದು ಸರ್ವೇ ನಂ. 273/ಎ 1 ಕ್ಷೇತ್ರ 5 ಎಕರೆ 1994 ರಲ್ಲಿ ಆಗಿತ್ತು. 2004 ರಲ್ಲಿ ಈ ರೀತಿ ಅದಲು ಬದಲು ಆದ ಜಮೀನು ಸರ್ವೇ ನಂಬರ್ ಗಳನ್ನು ಮಾತ್ರ ಬದಲಾಯಿಸಿಕೊಂಡೆವು, ಜಮೀನುಗಳನ್ನು ಇದ್ದದ್ದಂತೆ ಯಥಾಸ್ಥಿತಿಯಲ್ಲಿ ಕಾಯ್ದುಕೊಂಡೆವು,

3. ಶರಣಪ್ಪ ಹನಮಂತಪ್ಪ ಗಾಳಿ ಸಾಃ ಕೊಪ್ಪಳ ಇವರು 18-09-2017 ರಲ್ಲಿ ಶರಣಪ್ಪ ತಂದೆ ಹನಮಂತಪ್ಪ ಗಾಳಿ ಇವರು ನರಸಪ್ಪ ಯಂಕಪ್ಪ ಕರಮುಡಿ ಇವರಿಗೆ ಯಾವುದೇ ಮಕ್ಕಳು ಇರುವುದಿಲ್ಲ ಎಂದು ಹೇಳಿ ತನ್ನ ಹೆಸರಿಗೆ ಈ 2 ಹೊಲಗಳನ್ನು ದಾಖಲಿಸಬೇಕೆಂದು ಹೇಳಿ ಅರ್ಜಿ ಕೊಟ್ಟರು, ಈ ವಿಷಯ ನಮಗೆ ಗೊತ್ತಾಯಿತು. ಆದರೆ ತಹಶೀಲ್ದಾರವರು ಅವರ ಹೆಸರಿಗೆ ದಾಖಲಿಸಲಿಲ್ಲಾ.

4. 2 ಹೊಲಗಳ ಪೈಕಿ 4 ಎಕರೆ ಇದ್ದುದ್ದು ಗುಪ್ತಾ ಎನ್ನುವವರಿಗೆ 2007 ರಲ್ಲಿ ಮಾರಿದ್ದೇವೆ, 5 ಎಕರೆ ಇದ್ದ ಹೊಲವನ್ನು ಈರನಗೌಡರಿಗೆ 1994 ರಲ್ಲಿ ಮಾರಿದ್ದೇವೆ ಅದು ನಮ್ಮ ದೊಡ್ಡಪ್ಪ ರಾಮಪ್ಪನ ಹೊಲ.

5. ಈರನಗೌಡನ ಮಗ ಯಾರು ?

ಉತ್ತರ : ಗವಿಸಿದ್ದಪ್ಪ

6. ಈರಗನೌಡ ಸಾಗುವಳಿ ನಂತರ ಯಾರು ಮಾಡುತ್ತಾರೆ ?

ಉತ್ತರ : ಈರನಗೌಡನೇ ಮಾಡುತ್ತಿದ್ದಾನೆ. ಮುಂದುವರೆದು ಈರಗನೌಡನ ಮಗ ಗವಿಸಿದ್ದಪ್ಪ ಮಾಡುತ್ತಾನೆ ಎನ್ನುತ್ತಾರೆ.

7. ತಹಶೀಲ್ ಆಫೀಸ್ ಅಧಿಕಾರಿಗಳು ಏನು ಮಾಡಿದರು ?

ಉತ್ತ್ರರ : ಅವರು ಹೀಗೆ ಮಾಡುವುದರಿಂದ ತಪ್ಪು ಆಗುತ್ತದೆ ಅಂತಾ ಹೇಳಿದರು.

8. ಯಾವ ಉದ್ದೇಶಕ್ಕೆ ಅರ್ಜಿ ಕೊಟ್ಟಿದ್ದರು?

ಉತ್ತರ : ಸರ್ವೇ ನಂಬರ್ ಬದಲಾಗಿದ್ದವು ಆ ಉದ್ದೇಶಕ್ಕೆ ಅರ್ಜಿ ಕೊಟ್ಟಿದ್ದರು.

9. ಅರ್ಜಿ ಕೊಡುವುದರಿಂದ ಗವಿಸಿದ್ದಪ್ಪನಿಗೆ ಏನಾಯಿತು ?

ಉತ್ತ್ರರಃ ಅದರಿಂದ ಗವಿಸಿದ್ದಪ್ಪನಿಗೆ ತೊಂದರೆಯಾಯಿತು.

10. ಯಾವ ರೀತಿ ತೊಂದರೆಯಾಯಿತು?

ಉತ್ತ್ರರ : ಹೊಲ ಅದಲಿ ಬದಲಿ ಆಯಿತು.

11. ಈ ಕುರಿತು ಪೊಲೀಸರು ನನ್ನ ಹೇಳಿಕೆಯನ್ನು 2020 ರಲ್ಲಿ ಪಡೆದಿದ್ದಾರೆ.

12. ದಾಖಲೆ ಕೊಡುವಾಗ ಎಲ್ಲಿ ಇದ್ದಿ ?

ಉತ್ತರ : ನಾನು ಆಗ ಇರಲಿಲ್ಲಾ ಗವಿಸಿದ್ದಪ್ಪ ಕೊಟ್ಟಿದ್ದಾನೆ.

13. ಪಹಣಿ ಯಾವಾಗ ಬದಲಾಯಿತು ?

ಉತ್ತರ ಃ 2017 ರಲ್ಲಿ,

14. ಶರಣಪ್ಪನಿಗೆ ಸಾಕ್ಷಿ ನೋಡಿ ಗುರುತಿಸಿದ್ದಾರೆ.

<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಸ್ ಎ ಎಸ್   ವಕೀಲರಿಂದಃ</u>

ನನಗೆ ಕನ್ನಡ ಓದು ಬರಹ ಬರುತ್ತದೆ. ಈ ಜಮೀನಿಗೆ ಸಂಬಂದಪಟ್ಟಂತೆ ಒಂದು ಸಿವಿಲ್ ಕೇಸು ಇದೇ ಕೊರ್ಟನಲ್ಲಿ ನಡೆಯುತ್ತಿದೆ ಎಂದರೆ ಸರಿ. ಈಗ ತೋರಿಸಿದ ದಾಖಲೆ ಸದರಿ ಪ್ರಕರಣದಲ್ಲಿ ನಾವು  ಹಾಕಿದ ಪ್ರತಿವಾದ ಪತ್ರದ ಪ್ರತಿ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಾವು 7 ಜನ ಇದ್ದೇವೆ. ಸದರಿ ದಾಖಲೆ ನಿಡಿ 2 ಎಂದು ಗುರುತಿಸಲಾಯಿತು.

2. ಈಗ ತೋರಿಸಿದ ದಾಖಲೆ 2004 ರಲ್ಲಿ ಮಾಡಿಕೊಂಡ ವಿಭಾಗ ಪತ್ರ ಎಂದರೆ ಸರಿ, ಅದರ ಪ್ರಕಾರ ನಾವು 5 ಜನ ಗಂಡು ಮಕ್ಕಳ ಮಾತ್ರ ಕೂಡಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ದಾಖಲೆ ಪ್ರತಿ ನೋಡಿ ಗುರುತಿಸಿದ್ದು ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಸುರೇಶ ನನ್ನ ಸಹೋದರ ಎಂದರೆ ಸರಿ. ಈಗ ತೋರಿಸಿದ ದಾಖಲೆ ನನ್ನ ಸಹೋದರ ಸುರೇಶ ಇತ ನಮ್ಮ ಕುಟುಂಬದ ಆಸ್ತಿ 3 ಜನ ಸಹೋದರರಿಗೆ ಆಗಬೇಕೆಂದು ಕೊಟ್ಟ ಅರ್ಜಿ ಪ್ರತಿ ಎಂದರೆ ಸರಿ, ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಡಿ 4 ಎಂದು ಗುರುತಿಸಲಾಯಿತು.

3. ಈಗ ತೋರಿಸಿದ ಕೊಪ್ಪಳ ಜಮೀನು ಸರ್ವೇ ನಂ. 273/ಎ ಕ್ಷೇತ್ರ 4 ಎಕರೆ,  1978-79 ನೇ ಸಾಲಿನ ಪಹಣಿ ಪತ್ರಿಕೆ, ನನ್ನ ತಂದೆ ನರಸಪ್ಪ ವೆಂಕಪ್ಪ ಕರಮುಡಿ ಹೆಸರಿನಲ್ಲಿ ಇದೆ ಎಂದರೆ ಸರಿ. ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ನಿಡಿ 5 ಎಂದು ಗುರುತಿಸಲಾಯಿತು. ಈಗ ತೋರಿಸಿದ ಸರ್ವೇ ನಂ. 273/ಎ ಕ್ಷೇತ್ರ 4 ಎಕರೆ 1978-79 ನೇ ಸಾಲಿನ ಪಹಣಿ ಪತ್ರಿಕೆ ನಮ್ಮ ತಂದೆ ನರಸಪ್ಪ ತಂದೆ ವೆಂಕಪ್ಪ ಹೆಸರಿನಲ್ಲಿ ಇದೆಎಂದರೆ ಸರಿ. ಅಲ್ಲಿ ಅಡ್ಡ ಹೆಸರು ಕರಮುಡಿ ಅಂತಾ ಕಾಣಿಸಿಲ್ಲಾ ಎಂದರೆ ಸರಿ. ಸದರಿ ದಾಖಲೆ ನಿಡಿ 6 ಎಂದು ಗುರುತಿಸಲಾಯಿತು.

4. ಆರೋಪಿ ಶರಣಪ್ಪ ಇತ ಎಸಿಯವರ ಮುಂದೆ ಅಪೀಲು ಹಾಕಿ ಮರಳಿ ಪಡೆದ ಎಂದು ಪೊಲೀಸರ ಮುಂದೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಗೆ ನಾವೇ ಹೋಗಿದ್ದೇವು, ಪೊಲೀಸರು  ನಮ್ಮ ಮನೆಗೆ ಬಂದಿಲ್ಲ. ನಾನು ಮತ್ತು ಗವಿಸಿದ್ದ ಸೇರಿಯೇ ಪೊಲೀಸ್

ಠಾಣೆಗೆ ಹೋಗಿದ್ದೇವು, ಈ ವಿಷಯ ನನಗೆ ಗವಿಸಿದ್ದ ಹೇಳಿದ್ದ ಎಂದರೆ ಸರಿಯಲ್ಲ.

5. ಮದ್ಯಾಹ್ನ 12 ರಿಂದ 1 ಗಂಟೆ ಸುಮಾರಿಗೆ ಪೊಲೀಸ್ ಠಾಣೆಗೆ ಹೋಗಿದ್ದೇವು. ಪ್ರಭಾಕರಬಟ್ಟ ಶಿರಸ್ತೆದಾರ ಅಲ್ಲಿ ಇರಲಿಲ್ಲಾ. ನಮ್ಮ ಹೇಳಿಕೆಯನ್ನು ಪೊಲೀಸರೆ ಬರೆದುಕೊಂಡಿದ್ದಾರೆ. ಪೊಲೀಸರು ನನ್ನ ಸಹಿ ಪಡೆದಿಲ್ಲ. 1994 ರಲ್ಲಿ 271/3 ಈರನಗೌಡರಿಗೆ ನಮ್ಮ ದೊಡ್ಡಪ್ಪ ಮಾರಿದ್ದಾರೆ, 2007 ರಲ್ಲಿ 273/ಎ 1 ಮಾರಿದ್ದೇವೆ. ಮಾರಾಟ ಮಾಡಿದಾಗ ನಮ್ಮ ಹೆಸರಿಗೆ ಪಹಣಿ ಬಂದಿದ್ದವು ನಂತರ ಮಾರಿದ್ದೇವೆ.

6. ನನ್ನ ತಂದೆ 1985 ರಲ್ಲಿ ಮರಣ ಹೊಂದಿದ್ದಾರೆ. ನಮಗೆ ಜಮೀನು ಇರಲಿಲ್ಲಾ ಎಂದರೆ ಸರಿಯಲ್ಲ. ಗವಿಸಿದ್ದನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನೊಂದಿಗೆ ಗವಿಸಿದ್ದಪ್ಪ ಬಂದಿದ್ದಾನೆ ಎಂದರೆ ಸರಿ. ಗವಿಸಿದ್ದನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**